ಅವಘಡಗಳಿಂದ ಅವುಗಳ ಒಳಗಿನ ಆಜ್ಞಾ-ಬರಹಗಳ ತಂತ್ರಾಂಶ ಸಂಪೂರ್ಣ 'ಅಳಿಸಿ' ಹೋಗುವುದೇ! ಸಮೀಕ್ಷೆಯೊಂದರ ಪ್ರಕಾರ, ಜಗತ್ತಿನ ಬಳಕೆದಾರರು ಸರಿ ಸುಮಾರು 205 ಬಿಲಿಯನ್ ಆಪ್‌ಗಳನ್ನು ತಮ್ಮ ಮೊಬೈಲುಗಳಿಗೆ ಇಳಿಸಿಕೊಂಡಿದ್ದಾರೆಂದರೆ, ನಾಸಾದಂತಹ ಸಂಸ್ಥೆಯೇ ತನ್ನ 'ಫೋನ್-ಸ್ಯಾಟ್' ಕಾರ್ಯಕ್ರಮದ ಮೂಲದ ಬಾಹ್ಯಾಕಾಶಕ್ಕೂ ಸ್ಮಾರ್ಟ್ ಫೋನನ್ನು ಸಾಗಿಸಿದೆಯೆಂದರೆ, ಮೊಬೈಲ್ ಕ್ರಾಂತಿಯ ಹರಹನ್ನು ಅರಿಯಬಹುದು.

ಸ್ವಾರಸ್ಯ ಅದಕ್ಕೂ ಮೀರಿದ್ದು. ಇಷ್ಟೊಂದು ಅಗಾಧವಾಗಿ, ಯದ್ವಾ ತದ್ವಾ ಬಳಸಲ್ಪಡುತ್ತಿರುವ ಈ ಸಾಧನಗಳು ಅದೆಷ್ಟು ಬಾರಿ 'ಸತ್ತು' ಮತ್ತೆ ಜೀವ ಪಡೆದಿರಬುದೆಂದು. ಈ ನಿಟ್ಟಿನಲ್ಲಿ ದೊರೆತ ಅಂಕಿ ಅಂಶಗಳು ಬೆರಗುಗೊಳಿಸುತ್ತವೆ, ವಿಶ್ವದಾದ್ಯಂತ ಪ್ರಸ್ತುತ 3.8 ಬಿಲಿಯನ್ ಸ್ಮಾರ್ಟ್ ಫೋನುಗಳಲ್ಲದೆ, ಬೇರೆ ರೀತಿಯ 10 ಬಿಲಿಯನ್ ಮೊಬೈಲ್ ಉಪಕರಣಗಳಿಂದಾಗಿ ದಿನಕ್ಕೆ ಏನಿಲ್ಲವೆಂದರೂ 2.5 ಕ್ವಿಂಟಿಲಿಯನ್ ಬೈಟುಗಳಷ್ಟು 'ಡೇಟಾ'ಉತ್ಪತ್ತಿಯಾಗುತ್ತಿದೆ -ಎಂದಿಟ್ಟುಕೊಂಡರೆ, ಆ ಸಾಧನಗಳು ತಮ್ಮ ಜೀವಿತಾವಧಿಯಲ್ಲಿ ಒಮ್ಮೊಮ್ಮೆಯಾದರೂ 'ಅಳಿಸಿ'ಹೋದರೆ ಆ ಫೋನಿನ ಮೆಮೊರಿಯಲ್ಲಿರಬಹುದಾದ ಅಸಂಖ್ಯ ಸಂದೇಶಗಳು, ಲೆಕ್ಕವಿಲ್ಲದಷ್ಟು ಚಿತ್ರಗಳು, ಆ ಪಾಟಿ ಗೆಳೆಯ, ಗೆಳತಿಯರ, ಬ್ಯಾಂಕು-ವ್ಯವಹಾರದ ವಿವರಗಳು, ಇತ್ಯಾದಿ, ಇತ್ಯಾದಿ – ಇವುಗಳ ಗತಿಯೇನು? ಅವು ಕಳೆದು ಹೋದದ್ದೆಲ್ಲಿಗೆ? ಅವನ್ನೆಲ್ಲಾ ಬೆದಕಿ ಮತ್ತೆ ಗಳಿಸಿಕೊಳ್ಳುವ ವಿಧಾನಗಳಿದ್ದಾಗ್ಯೂ, ಉಳಿದು ಹೋಗುವ ಪ್ರಶ್ನೆಯೆಂದರೆ 'ಅಳಿಸಿ' ಹೋಗುವ ಈ ಹುನ್ನಾರಕ್ಕೆ ಕಾವಲು ಇಲ್ಲವೇ? ಮೊಬೈಲು ವ್ಯಸನಿಗಳ ಸಂಖ್ಯೆ, ಸರಾಸರಿ ಪ್ರತಿಶತ 66 ಆಗಿರುವ ಈ ಪರ್ವಕಾಲದಲ್ಲಿ 'ಅಳಿಸಿ'ಹೋಗುವುದು ಅಂಥವರಿಗೆ ಅದೆಂತಾ ಕುತ್ತು ತರುತ್ತಿರಬಹುದು? ವಿಚಿತ್ರವೆಂದರೆ, ಇಲ್ಲಿ, ಅಳಿಸುವುದಕ್ಕೂ ದಾರಿಯಿದೆ, ಅಳಿಸಿ ಹೋಗಿದ್ದನ್ನು ಮರು-ಪ್ರತಿಷ್ಠಾಪಿಸಲೂ ಮದ್ದಿದೆ! ಅದೇ ತೆರನಾಗಿ, ಕಂಪ್ಯೂಟರ್‌ಗಳ ಜೀವಾಳವಾದ ಚಿಪ್ಪುಗಳಲ್ಲಿ ಅಡಗಿರುವ ಅಷ್ಟೂ ಸಂಕೇತಗಳನ್ನು ಅತಿನೇರಳೆ ಕಿರಣಗಳ ಮೂಲಕ ಅಳಿಸಿ, ಇನ್ನೊಮ್ಮೆ ಬೇಕಾದಂತೆ ಬರೆಯಬಲ್ಲ ಛಾತಿಯನ್ನು ತಂತ್ರಜ್ಞಾನ ತೋರಿಸಿಕೊಟ್ಟಿದೆ. ಶಾಯಿಯಲ್ಲಿ ಬರೆದದ್ದನ್ನು ಅಳಿಸಿ ಬರೆಯುವಂತೆ, ಬಾಯಿಯಲ್ಲಿ ಆಡಿದ್ದನ್ನೂ 'ಅಳಿಸುತ್ತಾ' ಧ್ವನಿ ಮಾರ್ಪಾಡುಗಳನ್ನು ಮಾಡುವ ಸಂಕಲನಕಾರರ ಕೈಚಳಕವನ್ನು ಈ ಯುಗದಲ್ಲಿ ದೊರೆಯುತ್ತಿರುವ ವಿದ್ಯುನ್ಮಾನ ಉಪಕರಣಗಳು ಆಗುಮಾಡಿವೆ.

ಯಂತ್ರ-ತಂತ್ರಗಳಾಚೆಗೆ, ಮನುಷ್ಯ-ಮಿದುಳಿನ ಅನೂಹ್ಯ ಪ್ರಪಂಚದ 'ಅಳಿಸು'ಗಾರಿಕೆಯಂತೂ ಇನ್ನೂ ರೋಚಕ. ಈ ಮಿದುಳೆಂದರೆ ಅಪಾರವಾಗಿ ನೆನಪಿಟ್ಟುಕೊಳ್ಳಬಹುದಾದ ಆಗರ. ವಿಜ್ಞಾನಿಯ ದೃಷ್ಟಿಯಲ್ಲಿ, ಮಿದುಳಿನಲ್ಲಿ ಪ್ರೊಟೀನುಗಳು ನಡೆಸುವ ಪಾರುಪತ್ಯದ ಪ್ರಭಾವದಿಂದ, ದಿನಂಪ್ರತಿ ಹುಟ್ಟುವ ನ್ಯೂರಾನುಗಳಿಂದ, ಭಾವ-ತಂತುಗಳು ಸೃಜಿಸಿ - ನೆನಪುಗಳು ಅಲ್ಲಿ ಹೆಪ್ಪುಗಟ್ಟಿದ ಸ್ಥಿತಿಯಲ್ಲಿ ಇರುತ್ತವಂತೆ. ಆ ಹಳೆಯ ನೆನಪುಗಳನ್ನು ಮನುಷ್ಯ 'ನೆನಪು ಮಾಡಿಕೊಂಡರೆ' ಆ ಕ್ಷಣಕ್ಕೆ, ಆ ಹೆಪ್ಪಾದ ನೆನಪುಗಳು ಮತ್ತೆ ಕರಗಿ, ದ್ರವದ (ಗಾಜಿನ ದ್ರವ ಎಂದು ಭಾವಿಸುವ) ರೂಪ ಪಡೆದು, ಅದಕ್ಕೆ ಹೊಸದಾಗಿ ಭಾವ ರಸ ಮಿಳಿತಗೊಂಡು, ಅದೇ ನೆನಪು ಮಿದುಳಿನಲ್ಲಿ ಇನ್ನಷ್ಟು ಗಟ್ಟಿಯಾಗಿ ಹೆಪ್ಪಾಗುತ್ತಂತೆ. ಹೀಗೆ ನೆನಪುಗಳು ಹುಟ್ಟುವ, ಕರೆದಾಗಲೆಲ್ಲ ಕರಗಿ ದ್ರವವಾಗುವ, ಮತ್ತೆ ದುಪ್ಪಟ್ಟು ಹೆಪ್ಪಾಗುವ ಮುಂಚೆ, ಆ ನೆನಪುಗಳನ್ನು ನಿಯಂತ್ರಣಕ್ಕೆ ತೆಗೆದುಕೊಂಡು, ಬೇಡವಾದದ್ದನ್ನು ಅಳಿಸಿ, ಬೇಕಾದ್ದನ್ನು ಉಳಿಸುವುದಕ್ಕೆ ಸಾಧ್ಯವಿದೆ ಎಂದು 'ದಿ ಟೆಲಿಗ್ರಾಫ್'ನಲ್ಲಿ ಪ್ರಕಟವಾದ ಲೇಖನವೊಂದರಲ್ಲಿ ಮೆದುಳನ್ನು ರಾಸಾಯನಿಕವಾಗಿ ವಿಶ್ಲೇಷಿಸುತ್ತ ಹೇಳಲಾಗಿದೆ. 'ಟೋಟಲ್ ರೀಕಾಲ್' ಎನ್ನುವ ಚಲನ ಚಿತ್ರ ಕೂಡಾ ಇಂತಹ ಕಥಾವಸ್ತುವನ್ನೇ ಉಳ್ಳದ್ದಾಗಿತ್ತು ಎಂಬುದನ್ನು ಇಲ್ಲಿ ಸ್ಮರಿಸಬಹುದು. ಪ್ರೊಪ್ರನೋಲಾಲ್ ಎನ್ನುವ ಔಷಧಿಯ ಮೂಲಕ ನಡೆಸಿದ ಮಾನಸಿಕ ಅಧ್ಯಯನವೊಂದರ ಪ್ರಕಾರ ದಿನಕ್ಕೆ 70000 ಭಾವನೆಗಳ ಪುಟಗಳನ್ನು ಬರೆದಿಟ್ಟುಕೊಳ್ಳಬಲ್ಲ ಮಾನವ ಮಿದುಳಿನೊಳಗೆ, ಹೀಗೆ ಹುದುಗಿರುವ ನೆನಪಿನ ಪುಸ್ತಕದ ಸಾಲುಗಳನ್ನು ಹೊರಗಿನಿಂದ 'ಅಳಿಸಲು' ಸಾಧ್ಯವಿದೆ ಎಂದು ದೊಡ್ಡ ಮಟ್ಟದಲ್ಲಿ ಸಾರಿವೆ. ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ, ಇಲಿಗಳ ಮಿದುಳಿನಲ್ಲಿರುವ